**<u>ದಿಃ10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ-</u>**ವಾದಿ ಪರ ಶ್ರೀ. **T.H.V.,** ವಕೀಲರಿಂದಃ-

ಬಿದರಕೆರೆ ಗ್ರಾಮದಲ್ಲಿ ನನಗೆ ಸಂಬಂದಿಸಿದ ಆಸ್ತಿಯ ಸರ್ವೆ ನಂಬರ್ 25/2 ಇರುತ್ತದೆ . ಸದರಿ ಜಮೀನಿಗೆ ಸಂಬಂದಿಸಿದ ಹಾಗೆ ನಾನು ಜಮೀನಿಗೆ ಪಹಣಿ ಪತ್ರ ಹಾಜರುಪಡಿಸಿರುವುದಿಲ್ಲ . ಸದರಿ ಸರ್ವೆ ನಂಬರ್ 25/2 ಕ್ಕೆ ಸಂಬಂದಿಸಿದ ಹಾಗೆ ನಮ್ಮ ಕುಟುಂಬದಲ್ಲಿ ಯಾರಾ ಹೆಸರು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಐಟಂ ನಂಬರ್ 2 ಮೂಲತಃ ಆಸ್ತಿಯ ಬೋಸಪ್ಪ ಅವರಿಗೆ ಸಂಬಂದಿಸಿದ್ದು ಇರುತ್ತದೆ ಎಂದರೆ ಸರಿ. ಸದರಿ ಬೋಸಪ್ಪ ಅವರಿಗೆ 4 ಜನ ಅಣ್ಣ ತಮ್ಮಂದಿರು , 2 ಅಕ್ಕ ತಂಗಿಯರು ಇರುತ್ತಾರೆ ಎಂದರೆ ಸರಿ. ಸದರಿ 2 ಅಕ್ಕ ತಂಗಿಯರಲ್ಲಿ ತಿಪ್ಪವ್ವ ಎಂಬುವವರು ಒಬ್ಬರು ಇದ್ದರು ಎಂದರೆ ನನಗ ಗೋತ್ತಿಲ್ಲ . ಸದರಿ ತಿಪ್ಪವ್ವ ಅವರ ಗಂಡ ಹೆಸರು ಸತ್ತಾರು ಹನುಮಪ್ಪ ಇರುತ್ತದೆ ಎಂದರೆ ನನಗೆ ಗೋತ್ತಿಲ್ಲ . ಸದರಿ

ತಿಪ್ಪವ್ವ ಅವರ ಮಗನ ಹೆಸರು ತಿಮ್ಮಣ್ಣ ಇರುತ್ತಾರೆ ಎಂದರೆ ಸರಿ. ಸದರಿ ತಿಮ್ಮಣ್ಣ ಅವರಿಗೆ ಬೋಸಪ್ಪ ಅವರ ತಮ್ಮ ಮನೆಯಲ್ಲಿ ಇಟ್ಟುಕೊಂಡು ಸಾಕಿ ಬೆಳಿಸಿ ಅವರಿಗೆ ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ಆಸ್ತಿಗಳನ್ನು ನಿಪಿ 1 ರಂತೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ಸದರಿ ನಿಪಿ 1 ದಾನಪತ್ರದಲ್ಲಿ ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ಆಸ್ತಿಗಳನ್ನು ದಾನವಾಗಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ನಿಪಿ 1 ದಾನಪತ್ರವು ದಿ:30.11.1971 ರಲ್ಲಿಯೋ ಜಗಳೂರಿನ ಉಪ ನೊಂದಾಣಾದಿಕಾರಿ ಕಛೇರಿಯಲ್ಲಿ ನೊಂದಾಣಿ ಆಗಿರುತ್ತದೆ ಎಂದರೆ ಸರಿ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ . ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ಆಸ್ತಿಗಳನ್ನು ನಿಪಿ 1 ದಾನಪತ್ರ ರಚಿಸುವ ಕಾಲಕ್ಕೆ ಸ್ವಾಧೀನ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಿಡಿ 1 ರಂತೆ ನಮ್ಮ ತಂದೆಯಾದ ತಿಪ್ಪಣ್ಣ ಅವರಿಗೆ ದಾನಪತ್ರ ಆಗಿರುತ್ತದೆ ಎಂದು ಹೇಳುತ್ತಾರೆ . ನಿಪಿ 1 ದಾನಪತ್ರದಂತೆ ತಿಮ್ಮಣ್ಣ ಅವರಿಗೆ ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ಆಸ್ತಿಗಳಲ್ಲಿ ಪಹಣಿಗಳು ಬದಲಾವಣೆ ಆಗಿರುತ್ತವೆ ಎಂದರೆ ಸೃಷ್ಠಿ ಮಾಡಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿ ಐಟಂ ನಂಬರ್ 3 ಆಸ್ತಿಯು ವಾದಿ 1 ಕಾಟಮ್ಮ ಅವರ ಹೆಸರಿಗೆ ಪಹಣಿ ಇರುತ್ತದೆ ಎಂದರೆ ಸಾಕ್ಷಿ ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿ ಐಟಂ 3 ಆಸ್ತಿಯು ವಾದಿ 1 ರವರು ನಿಪಿ 2 ರಂತೆ ತಿಪ್ಪಯ್ಯ ತಂದೆ ತಿಪ್ಪಯ್ಯ ಕಬ್ಬಿಗೆರೆ ಮತ್ತು ಮೈನರ್ ಮಗ ತಿಪ್ಪೇಸ್ವಾಮಿ ತಂದೆ ತಿಪ್ಪಯ್ಯ ಅವರಿಂದ ಖರೀದಿ ಮಾಡಿದ ಆಸ್ತಿ ಎಂದರೆ ಸಾಕ್ಷಿ ನಮ್ಮ ಅಜ್ಜರವರ ಆಸ್ತಿ ಎಂದು ಹೇಳುತ್ತಾರೆ . ದಾವಾ ಆಸ್ತಿ ಐಟಂ ನಂಬರ್ 3 ಆಸ್ತಿಯು ನಮ್ಮ ಅಜ್ಜರ ಆಸ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ . ನಾನು ಈ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ , ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂಬರ್ 1 ರಿಂದ 3 ಆಸ್ತಿಗಳು ವಾದಿ ಮತ್ತು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನಮ್ಮ ಕುಟುಂಬಕ್ಕೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು